ಓ.ಎಸ್ ನಂ.132/2024
ಪಿ.ಡಬ್ಲ್ಯೂ-1 ದುಂಡವ್ವ ಗಂಡ ಶಶಿಕಾಂತ

**(ಇಂದು ದಿನಾಂಕಃ 20-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ಬೋಜಪ್ಪ ನನ್ನ ಅಜ್ಜನಾಗಬೇಕು. ನನ್ನ ಅಜ್ಜ ಬೋಜಪ್ಪನ ತಂದೆಯ ಹೆಸರು ಯಶವಂತ ಎಂದರೆ ಸರಿ. ಯಶವಂತರವರಿಗೆ ಬೋಜಪ್ಪ, ರಾಮಚಂದ್ರ ಮತ್ತು ಚಂದ್ರಶಾ ಎಂಬ ೩ ಜನ ಮಕ್ಕಳು ಎಂದರೆ ಸರಿ. ಸದರಿ ೩ ಜನ ಈಗ ಮೃತರಾಗಿರುತ್ತಾರೆ ಎಂದರೆ ಸರಿ. ರಾಮಚಂದ್ರರವರಿಗೆ ನಾಗಪ್ಪ ಮತ್ತು ಮಲ್ಲಿಕಾರ್ಜುನ ಎಂಬ ೨ ಜನ ಮಕ್ಕಳಿರುತ್ತಾರೆ ಎಂದರೆ ಸರಿ. ಮಲ್ಲಿಕಾರ್ಜುನ ಕೂಡಾ ಮೃತರಾಗಿರುತ್ತಾರೆ ಎಂದರೆ ಸರಿ. ಮಲ್ಲಿಕಾರ್ಜುನರವರಿಗೆ ಅಂಬವ್ವ ಎಂಬ ಹೆಂಡತಿ ಮತ್ತು ವೈಶಾಲಿ ಎಂಬ ಮಗಳು ಇರುತ್ತಾರೆ ಎಂದರೆ ಸರಿ. ಚಂದ್ರಶಾರವರಿಗೆ ಧೂಳಪ್ಪ ಒಬ್ಬನೆ ಮಗ ಎಂದರೆ ಸರಿ. ಧೂಳಪ್ಪನಿಗೆ ಭೀಮರಾಯ ಮತ್ತು ಚಂದ್ರಶಾ ಎಂಬ ಮಕ್ಕಳಿರುತ್ತಾರೆ ಎಂದರೆ ಸರಿ. ಬೋಜಪ್ಪರವರಿಗೆ ಭೀಮರಾಯ ಮತ್ತು ಯಶವಂತ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿ. ಬೋಜಪ್ಪರವರಿಗೆ ಸುಂದರವ್ವ ಎಂಬ ಮಗಳು ಇದ್ದಳು, ಅವಳು ಈಗ ೨ ವರ್ಷಗಳ ಹಿಂದೆ ಮೃತಳಾಗಿರುತ್ತಾಳೆ.

೨. ನನ್ನ ಅಜ್ಜ ಬೋಜಪ್ಪರವರು ೧೯೭೨ ರಲ್ಲಿ ಮೃತರಾಗಿರುತ್ತಾರೆ. ಬೋಜಪ್ಪರವರು ಮೃತರಾದ ನಂತರ ಭೀಮರಾಯ ಮತ್ತು ಯಶವಂತರವರು ನಮ್ಮ ಮನೆಯ ಜವಾಬ್ದಾರಿ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ೧ನೇ ಪ್ರತಿವಾದಿ ಯಶವಂತ ಮಾತ್ರ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ನನ್ನ ಅಜ್ಜ ಬೋಜಪ್ಪರವರು ಮೃತರಾದ ೧ ವರ್ಷದ

ನಂತರ ನನ್ನ ತಂದೆ ಮೃತರಾಗಿರುತ್ತಾರೆ. ನಾನು ಆ ಸಮಯದಲ್ಲಿ ಸುಮಾರು ೧ ರಿಂದ ೨ ವರ್ಷ ವಯಸ್ಸಿನವಳು ಇದ್ದೆ. ನನ್ನ ತಾಯಿಯ ಹೆಸರು ಹೂವಕ್ಕ ಆಗಿರುತ್ತದೆ. ಸರ್ವೆ ನಂಬರ ೧೯೮ ರ ಜಮೀನು ನಮ್ಮ ತಾಯಿಯ ಪಾಲಿಗೆ ಬಂದಿತ್ತು ಎಂದರೆ ಸರಿ. ಈ ದಾವೆಯಲ್ಲಿ ಸದರಿ ಜಮೀನನ್ನು ನಾವು ಸೇರ್ಪಡೆ ಮಾಡಿಲ್ಲ ಎಂದರೆ ಸರಿ.

೩. ದಾವಾ ಜಮೀನುಗಳು ನಮ್ಮ ಕಾಕ ಆದ ೧ನೇ ಪ್ರತಿವಾದಿ ಯಶವಂತರವರ ಪಾಲಿಗೆ ಬಂದಿದ್ದವು ಎಂದರೆ ಸರಿ. ನಾನು ಈಗ ೨ನೇ ಅಣ್ಣತಮ್ಮಂದಿರ ಮಾತುಕೇಳಿ ಈಗಾಗಲೇ ಪಾಲು ಆಗಿದ್ದರೂ ಸಹ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.